

◆ **ಕೆಲಕಾಲದಿಂದ ನಾನು ನಿಮ್ಮ ಹಾಡುಗಳನ್ನು ಕೇಳುತ್ತ, ನಿಮ್ಮ ಮಾತು, ವಿಚಾರಗಳ ಮೂಲಕ ಹೊಸದೊಂದು ಲೋಕವನ್ನು ಅರಿಯಲು ಯತ್ನಿಸುತ್ತಿದ್ದೇನೆ. ಹಿಂದಿನ ಯಾವುದೋ ಒಂದು ಸಂದರ್ಶನದಲ್ಲಿ ನೀವು 'ಕಲೆ' ಅನ್ನೋದು ನಮ್ಮ ವ್ಯಕ್ತಿತ್ವದ ಒಂದು ಭಾಗ, ಅದು ನಮ್ಮ 'ಐಡೆಂಟಿಟಿ'ಯನ್ನು ಕನ್ನಡಿಸುತ್ತೆ' ಅಂತ ಹೇಳಿದ್ದನ್ನ ಕೇಳಿದೆ. ನಿಮ್ಮ ಪ್ರಕಾರ 'ಐಡೆಂಟಿಟಿ' ಅಂದ್ರೆ ಏನು ಮತ್ತು ಅದು ಎಷ್ಟು ಮುಖ್ಯ?**

ನಮ್ಮ ಒಟ್ಟಾರೆ ಲೈಫ್‌ಟೈಮ್‌ನಾಗ ನಾವು ಹಲವಾರು 'ಐಡೆಂಟಿಟಿ'ಗಳನ್ನ ಪೋರ್‌ಟ್ರೇ ಮಾಡ್ತೀವಿ, ಅದು ಬದಲಾಗ್ತನೇ ಹೋಗ್ತದ. ನನ್ನ ಮಟ್ಟಿಗೆ 'ಐಡೆಂಟಿಟಿ' ಅನ್ನೋದಕ್ಕ ಅರ್ಥ ಬರೋದು ಕಾಂಟೆಕ್ಸ್ಟ್ ನಿಂದ. ಅದು ಐತಿಹಾಸಿಕ ಸಂದರ್ಭ ಆಗಿರಬಹುದು, ಅಥವಾ ನಮ್ಮ ಮನೆತನದ ಹಿಂದಿನವರ ಅಥವಾ ಸಾಂಸ್ಕೃತಿಕ ಸಂದರ್ಭ ಆಗಿರಬೋದು. ಈ ಕಾಂಟೆಕ್ಸ್ಟ್ ಇಲ್ಲದೆ ಹೋದಾಗ 'ಐಡೆಂಟಿಟಿ' ಅನ್ನಾದು ಜಾತಿವಾಚಕ ಆಗಿಬಿಡ್ತದ. ಇದು ಯಾವ ತರ ಅಂದ್ರ... ಒಂದು ಪಾಪ್ ಹಾಡಿದಂಗ. ಅದನ್ನ ಯಾವುದೇ ಭಾಷೆಗೆ ಬದಲಾಯಿಸಿದ್ರೂ ಅದು ಅಂಥಾ ವ್ಯತ್ಯಾಸ ಏನೂ ಆಗಾಂಗಿಲ್ಲ. ಅದರ ರಿದಂನಲ್ಲಿ ಬದಲಾವಣೆ ಆಗಾಂಗಿಲ್ಲ. ಉದಾಹರಣೆಗೆ, ನಾನು ಶಾಲೆ, ಕಾಲೇಜಿನಾಗ ಓದ್ತಾ ಇರೋವರ್ಗು ನನ್ನ ಸಾಂಸ್ಕೃತಿಕ ಬೇರುಗಳ ಜೊತಿಗಿನ ಸಂಪರ್ಕ ನಂಗೆ ಅಷ್ಟು ಮುಖ್ಯ ಆಗಿರ್ಲಿಲ್ಲ. ನಾನೊಬ್ಬಳು ಕಾನ್ವೆಂಟ್‌ನಲ್ಲಿ ಓದಿದ, ಮೌಂಟ್ ಕಾರ್ಮಲ್‌ನ ಇಂಗ್ಲಿಷ್ ಮಾತಾಡೋ, ಸಾಕಷ್ಟು ಅನುಕೂಲ ಇದ್ದ ಹುಡುಗಿ ಆಗಿದ್ದೆ. 'ನಾನು ಯಾರು?' ಅನ್ನೋ ಪ್ರಶ್ನೆ ಏನದಲ್ಲ ಅದು... ಓದಿ, ಜೀವ್ನದ ಸ್ವಂತ ಆಯ್ಕೆ, ನಿರ್ಧಾರಗಳ್ನ ಮಾಡೂದು ನನಗೇ ಬಿಟ್ಟಿದ್ದು ಅನ್ನೋಂತದ್ದು ಇಪ್ಪತ್ತನೇ ವಯಸ್ಸಿನ ನನ್ನ ಉತ್ತರ ಆಗಿತ್ತು. ಆದ್ರ ನಾನು ಇಪ್ಪತ್ತರಿಂದ ಹಿಡ್ದು ಸುಮಾರು ಮೂವತ್ತನೆ ವಯಸ್ಸಿಗೆ ಹತ್ರ ಆಗ್ತಿದ್ದಾಗ ಸಾಂಸ್ಕೃತಿಕ, ಐತಿಹಾಸಿಕ, ಜಾತಿಯ ಕಾಂಟೆಕ್ಸ್ಟ್ ಎಲ್ಲ ಬ್ಯಾರೆ ಕಾಣಕ್ಕ ಶುರುವಾತು...

◆ **...ಅದು ಹೇಗೆ?**

...ರೋಹಿತ್ ವೇಮುಲ ತೀರಿಕೊಂಡ ಹೊತ್ನಾಗ ಮತ್ತು ಆಮೇಲೆ ನಂಗೆ ಎಷ್ಟೊಂದು ಹೊಸ ವಿಷ್ಯ ಅರಿವಾಗ್ಲಕ ಶುರುವಾತು. ಅಲ್ಲಿತನ ಜಾತಿ ಅನ್ನಾದು ವೈಯಕ್ತಿಕವಾಗಿ ನನಗೆ ಸಂಬಂಧಿಸಿದ್ದಲ್ಲ ಅಂದ್ಕೊಂಡಿದ್ದೆ. ಯಾಕಂದ್ರ ಚಿಕ್ಕದ್ರಿಂದ ನನ್ನ ತಂದೆ ಎಡ-ಬಲ ರಾಜಕೀಯದ ಬಗ್ಗೆ,